**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.1002/2017**

**ಪಿಡಬ್ಲೂ-9**

**ಸಿಡಬ್ಲೂ-9**

| | | |
|---|---|---|
| ಸಾಕ್ಷಿದಾರರ ಹೆಸರು | - | ಡಾ ಮಾದವ್ |
| ತಂದೆಯ ಹೆಸರು | - | ರಾಮಾರಾವ್ |
| ವಯಸ್ಸು | - | 46 |
| ಕೆಲಸ | - | ಹಿರಿಯ ತಜ್ಞರು, ಸರ್ಕಾರಿ ಆಸ್ಪತ್ರೆ, ಕೆ ಆರ್ ನಗರ |
| ವಾಸ | - | ಮೈಸೂರು |

**ದಿನಾಂಕ 18-09-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ದಿಃ 12.04.2003 ರಿಂದ ದಿಃ30.06.2013 ವರೆಗೆ ಮತ್ತೆ ಪುನಃ ದಿಃ20.07.2015 ರಿಂದ ಇಲ್ಲಿಯವರೆಗೆ ಕೆ ಆರ್ ನಗರ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿಃ10.06.2013 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ಚಾಸಾ 3 ರವರ ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ತಪಾಸಣೆಗೆ ಒಳಪಡಿಸಲಾಗಿ ಅವರ ತಲೆಯ ಎಡಭಾಗದಲ್ಲಿ 8 ಇಂಟು 1 ಸೆಂಟಿಮೀಟರ್ ಅಳತೆಯ ತಲೆಯ ಚರ್ಮದ ಆಳದ ಹರಿದ ಗಾಯ ಆಗಿದ್ದು ಕಂಡು ಬಂದಿದ್ದು ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಹಾಗೂ ಗಾಯದ ವಯಸ್ಸು ತಾಜಾ ಆಗಿರುತ್ತದೆ.

ಸಾಮಾನ್ಯವಾಗಿ ಮೂಮಾ 1 ರಂತಹ ವಸ್ತುವಿನಿಂದ ಯಾವುದೇ ವ್ಯಕ್ತಿಯ ತಲೆಗೆ ಹೊಡೆದರೆ ಮೇಲ್ಕಂಡ ಗಾಯ ಆಗುವ ಸಾದ್ಯತೆ ಇರುತ್ತದೆ. ಈಗ ಸಾಕ್ಷಿಗೆ ತೋರಿಸಿದ ಚಾಸಾ 3 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಚಾಸಾ 1 ರವರು ಗಾಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ತಪಾಸಣೆಗೆ ಒಳಪಡಿಸಲಾಗಿ ಅವರ ಎಡಗೈ ಉಂಗುರದ ಬೆರಳು ಡೊಂಕಾಗಿದ್ದು ಕಂಡು ಬಂದಿದ್ದು, ಅದೇ ರೀತಿ ಎಡಗೈನ ಮುಂಗೈಗೆ 2 ಇಂಟು 1 ತರಚಿದ ಗಾಯ, ಸದರಿ ಇವರಿಗೆ ಕ್ಷ ಕಿರಣ ಪರೀಕ್ಷೆಯನ್ನು ಮಾಡಿಸಿದ್ದು ಎಡಗೈನ ಉಂಗುರ ಬೆರಳಿನ ಕೀಲು ತನ್ನ ಸಾಮಾನ್ಯ ಜಾಗದಿಂದ ಜಾರುಗಿಕೊಂಡಿದ್ದು ಕಂಡುಬಂದಿದ್ದು

ನಂತರ ಅವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಕೀಲು ಮತ್ತು ಮೂಳೆ ತಜ್ಞರ ಬಳಿ ಕಳುಹಿಸಿಕೊಟ್ಟಿದ್ದು. ಸದರಿ ಗಾಯದಲ್ಲಿ ಮೊದಲನೆ ಗಾಯವು ತೀವ್ರ ಸ್ವರೂಪದ ಗಾಯವಾಗಿದ್ದು ಸದರಿ ಗಾಯದ ವಯಸ್ಸು ಹೇಳಲಾಗುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಗಾಯವು ಬರಿ ನೋವಿನಿಂದ ಕೂಡಿದ್ದರಿಂದ ಅದನ್ನು ತಾಜಾಗಾಯ ಎಂದು ಪರಿಗಣಿಸಲಾಗುತ್ತದೆ. 2ನೇ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಹಾಗೂ ಅದರ ವಯಸ್ಸು ತಾಜಾ ಆಗಿರುತ್ತದೆ.

ನಂತರ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ತೋರಿಸಿದ ಗಾಯದ ಪ್ರಮಾಣ ಪತ್ರವನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು.

ಅದೇ ರೀತಿ 3.10 ಗಂಟೆ ಚಾಸಾ 2 ಇವರು ಗಾಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು  ತಪಾಸಣೆಗೆ ಒಳಪಡಿಸಲಾಗಿ ಚಾಸಾ 2 ರವರ ದವಡೆಯ ಬಲ ಮೇಲ್ಭಾಗದ ಹಲ್ಲು ಇರಲಿಲ್ಲ ಆ ಸ್ಥಳದಲ್ಲಿ ರಕ್ತ ಸ್ರಾವವಾಗುತ್ತಿದ್ದು ಕಂಡು ಬಂದಿತು. ಸದರಿಯವರ ಎದೆಯ ಎಲ್ಲಾ ಭಾಗದಲ್ಲಿ ನೋವು ಕಂಡು ಬಂದಿದ್ದು, ಬೆನ್ನಿನ ಸಂಪೂರ್ಣ ಭಾದಲ್ಲಿ ನೋವು ಕಂಡು ಬಂದಿದ್ದು, ನಂತರ ತಲೆಯ ಎಲ್ಲಾ ಭಾಗದಲ್ಲಿ ನೋವು ಕಂಡು ಬಂದಿದ್ದು ಸದರಿ ಗಾಯಗಳಲ್ಲಿ ಮೊದಲನೇ ಗಾಯವು ತೀವ್ರ ಸ್ವರೂಪದ ಗಾಯವಾಗಿದ್ದು ಸದರಿ ಗಾಯದ ವಯಸ್ಸು ತಾಜಾ ಆಗಿದ್ದು , ಅದೇ ರೀತಿ 2 ರಿಂದ 4ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಸದರಿ ಗಾಯಗಳ ವಯಸ್ಸು ತಾಜಾ ಆಗಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಗುದ್ದಿದಾಗ ಹಾಗೂ ಒದ್ದಿದಾಗ ಈ ಮೇಲೆ ಹೇಳಿದ ಗಾಯಗಳು ಆಗುತ್ತವೆ. ಈಗ ಸಾಕ್ಷಿಗೆ ತೋರಿಸಿದ ಗಾಯದ ಪ್ರಮಾಣ ಪತ್ರವನ್ನು ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಗಾಗಿ ಮಾನ್ಯ ಎಪಿಪಿ ರವರು ಕೋರಿದ್ದರಿಂದ ನೀಡಲಾಯಿತು.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರಧಾನ್ಯಾದಂ., ಕೆ.ಆರ್.ನಗರ